
# ಶ್ರೀರಾಮಕೃಷ್ಣರು ಮತ್ತು ವಿಶ್ವಧರ್ಮಗಳು

ಸ್ವಾಮಿ ಅನುಪಮಾನಂದ



**ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ ।**
**ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥**

"ಧರ್ಮಸ್ಥಾಪಕರೂ, ಸರ್ವಧರ್ಮಸ್ವರೂಪರೂ, ಅವತಾರ ವರಿಷ್ಠರೂ ಆದ ಶ್ರೀರಾಮಕೃಷ್ಣರಿಗೆ ನಮಸ್ಕಾರ." ನವಗೋಪಾಲ ಘೋಷ್ ಎನ್ನುವ ಭಕ್ತರ ಮನೆಯಲ್ಲಿ ಶ್ರೀರಾಮಕೃಷ್ಣರ ಮೂರ್ತಿಯನ್ನು ಪ್ರತಿಷ್ಠಾಪಿಸುವಾಗ ಸ್ವಾಮಿ ವಿವೇಕಾನಂದರು ಈ ಪ್ರಣಾಮ ಮಂತ್ರವನ್ನು ರಚಿಸಿ ಪಠಿಸಿದರು. ಈ ಮಂತ್ರದಲ್ಲಿ ಅವರು ಶ್ರೀರಾಮಕೃಷ್ಣರನ್ನು '**ಸರ್ವಧರ್ಮ ಸ್ವರೂಪಿ**' ಎಂದು ವರ್ಣಿಸಿದ್ದಾರೆ.

ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳನ್ನು ಅಧ್ಯಯನ ಮಾಡಿದಾಗ ಧರ್ಮದ ಬಗ್ಗೆ ಅವರಿಗಿದ್ದ ವಿಶಾಲ ಮನೋಭಾವ ನಮ್ಮ ಅರಿವಿಗೆ ಬರುತ್ತದೆ. ಅವರ ದೃಷ್ಟಿಯಲ್ಲಿ ಧರ್ಮವೆಂದರೆ ಭಗವಂತನನ್ನು ಸೇರಲು ಇರುವ ಮಾರ್ಗ. "ಪ್ರತಿಯೊಂದು ಧರ್ಮವೂ ಭಗವಂತನನ್ನು ಸೇರಲು ಇರುವ ಒಂದೊಂದು ಮಾರ್ಗ", "ಎಷ್ಟು ಮತಗಳೋ ಅಷ್ಟು ಪಥಗಳು" ಎಂದು ಅವರು ಹೇಳುತ್ತಿದ್ದರು. ಇದನ್ನು ಅವರು ಯಾವುದೇ ಗ್ರಂಥವನ್ನು ಅಧ್ಯಯನ ಮಾಡಿ ಹೇಳಲಿಲ್ಲ. ಅಂದು ಪ್ರಚಲಿತವಿದ್ದ ಎಲ್ಲ ಮಾರ್ಗಗಳನ್ನೂ ಅನುಸರಿಸಿ, ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ತಮ್ಮ ಸ್ವಂತ ಅನುಭವದಿಂದ ಅದನ್ನು ಜಗತ್ತಿಗೆ ಸಾರಿದರು.

ಶ್ರೀರಾಮಕೃಷ್ಣರು ಕೇವಲ ವ್ಯಾಕುಲತೆಯ ಆಧಾರದ ಮೇಲೆ ಯಾವುದೇ ಗುರುವಿನ ಮಾರ್ಗ ದರ್ಶನವಿಲ್ಲದೆ ಜಗನ್ಮಾತೆ ಕಾಳಿಯನ್ನು ಪೂಜಿಸಿ, ಭಜಿಸಿ, ಧ್ಯಾನಿಸಿ ಸಾಕ್ಷಾತ್ಕರಿಸಿಕೊಂಡರು. ನಾವು ಹೇಗೆ ನಮ್ಮ ಸುತ್ತಮುತ್ತಲಿನ ಜಗತ್ತನ್ನು ನೋಡು ತ್ತೇವೆಯೋ ಅದಕ್ಕಿಂತಲೂ ನಿಖರವಾಗಿ ಅವರು ಭಗವಂತನನ್ನು ನೋಡುತ್ತಿದ್ದರು. ಅವರೊಬ್ಬ ಅದ್ಭುತ ಸಾಧಕರಾಗಿದ್ದರು. ಸಾಧನೆಗೆ ಅವರ ಮನಸ್ಸು ಅತ್ಯಂತ ಪ್ರಶಸ್ತವಾಗಿತ್ತು. ಈ ಕಾರಣದಿಂದಾಗಿ ಯಾವುದೇ ಸಾಧನೆಯನ್ನು ಅವರು ಕೈಗೆತ್ತಿಕೊಂಡರೂ, ಅದರ ತಿರುಳನ್ನು ಅರಿತು, ತಮ್ಮ ದೇಹ ಮತ್ತು ಮನಸ್ಸುಗಳನ್ನು ಆ ಸಾಧನೆಗೆ ಮುಡಿಪಾಗಿರಿಸಿ, ಶೀಘ್ರವಾಗಿ ಆ ಮಾರ್ಗದಲ್ಲಿ ಗುರಿ ಸೇರುತ್ತಿದ್ದರು. ಜಗನ್ಮಾತೆಯನ್ನು ಸಾಕ್ಷಾತ್ಕರಿಸಿಕೊಂಡ ಮೇಲೆ ಅವರ ಮನಸ್ಸು ಇತರ ಧರ್ಮಮಾರ್ಗಗಳ ಮೂಲಕ ಸಾಧನೆಯನ್ನು ಮಾಡಲು ಇಚ್ಛಿಸಿತು. ಅವರೇ ಹೇಳುತ್ತಿದ್ದಂತೆ ಏಕತಾನತೆ ಅವರಿಗೆ ಇಷ್ಟವಿರಲಿಲ್ಲ. ಸಂಗೀತ ವಾದ್ಯಗಳ ಉದಾ ಹರಣೆಯನ್ನು ನೀಡುತ್ತ, "ನನಗೆ ಕೇವಲ ಒಂದೇ ಶ್ರುತಿಯನ್ನು ನುಡಿಸುತ್ತಿರಲು ಇಷ್ಟವಿಲ್ಲ, ನಾನು ಹಲವಾರು ರಾಗ-ರಾಗಿಣಿಗಳನ್ನು ನುಡಿಸಲು ಇಚ್ಛಿಸುತ್ತೇನೆ" ಎನ್ನುತ್ತಿದ್ದರು ಅವರು.

ಗೋವಿಂದರಾಯ್ ಎನ್ನುವ ಸೂಫಿ ಸಂಪ್ರದಾಯದ ಅನುಯಾಯಿಯೊಬ್ಬನು ದಕ್ಷಿಣೇಶ್ವರಕ್ಕೆ ಬಂದನು. ಸರಳ ಹಾಗೂ ಭಾವುಕ ಭಕ್ತನಾದ ಆತನ ಸಹವಾಸದಿಂದಾಗಿ ಶ್ರೀರಾಮಕೃಷ್ಣರ ಮನಸ್ಸು ಇಸ್ಲಾಂ ಮತದ ಕಡೆಗೆ ಆಕರ್ಷಿತವಾಯಿತು. ಆತನಿಂದ ದೀಕ್ಷೆಯನ್ನು ಪಡೆದು ಅವರು ಇಸ್ಲಾಂ ಸಾಧನೆಯನ್ನು ಪ್ರಾರಂಭಿಸಿದರು. ದಿನಕ್ಕೆ ಮೂರು ಸಲ ನಮಾಜು ಮಾಡಿದರು. ಸದಾ 'ಅಲ್ಲಾ, ಅಲ್ಲಾ' ಎಂದು ಜಪಿಸಿದರು. ಈ ಸಮಯದಲ್ಲಿ ಅವರು ನೀಳ ಗಡ್ಡದಿಂದ ಕೂಡಿದ, ಗಂಭೀರ

ಶ್ರೀರಾಮಕೃಷ್ಣರು ಹಿಂದೂಧರ್ಮದಲ್ಲಿ ಹುಟ್ಟಿದವರಾದರೂ ಇತರ ಧರ್ಮಗಳಲ್ಲೂ ಸಾಧನೆ ಮಾಡಿ ಭಗವಂತನ ಸಾಕ್ಷಾತ್ಕಾರ ಪಡೆದವರು. ಹೀಗಾಗಿ ಎಲ್ಲ ಧರ್ಮಗಳೂ ಅವರಿಗೆ ತಮ್ಮದೇ ಆಗಿತ್ತು. ಈ ಅಂಶವನ್ನು ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಹೈದರಾಬಾದಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಉತ್ತಮ ವಾಗ್ಮಿಗಳು.

ಮುಖಭಾವದ ಜ್ಯೋತಿರ್ಮಯ ಪುರುಷನೊಬ್ಬನ ದಿವ್ಯ ದರ್ಶನವನ್ನು ಪಡೆದರು. ಅನಂತರ ಸಗುಣ ಬ್ರಹ್ಮದ ಸಾಕ್ಷಾತ್ಕಾರದ ಮೂಲಕ, ನಿರ್ಗುಣ ಬ್ರಹ್ಮದಲ್ಲಿ ಅವರ ಮನಸ್ಸು ಲೀನವಾಯಿತು. ನಂತರವೂ ಸಹ ಅವರು ದಕ್ಷಿಣೇಶ್ವರದ ಬಳಿ ಇದ್ದ ಮಸೀದಿಗೆ ಆಗಾಗ ಹೋಗಿ, ಮುಸ್ಲಿಮರಂತೆ ಬಟ್ಟೆ ತೊಟ್ಟು, ಮುಸ್ಲಿಮರ ಜೊತೆಗೂಡಿ ಪ್ರಾರ್ಥಿಸುತ್ತಿದ್ದರು. ಮುಸ್ಲಿಮರ ಬಗ್ಗೆ ಅವರ ಮನೋಭಾವ ಹೇಗಿತ್ತು ಎನ್ನುವುದು ಮನ್ಮಥನಾಥ ಘೋಷ್ ಎನ್ನುವ ಭಕ್ತ ಹೇಳಿದ ಈ ಘಟನೆಯಿಂದ ನಮಗೆ ತಿಳಿಯುತ್ತದೆ: ಕೊಲ್ಕತಾದ ಕಾಳೀಘಾಟಿನ ಬಳಿ ಇರುವ ಗೆರತಲಾ ಎನ್ನುವ ಸ್ಥಳದಲ್ಲಿರುವ ಮಸೀದಿಯೊಂದರಲ್ಲಿ ಫಕೀರನೊಬ್ಬ, "ಓ ಪ್ರಿಯಾ! ದಯವಿಟ್ಟು ಬಾ!" ಎಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತಿದ್ದನು. ಅದನ್ನು ಕಂಡ ಶ್ರೀರಾಮಕೃಷ್ಣರು ಗಾಡಿಯಿಂದ ಕೆಳಗಿಳಿದು ಆ ಫಕೀರನೆಡೆಗೆ ಓಡಿದರು ಮತ್ತು ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡರು.

ಒಮ್ಮೆ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಇನ್ನೊಂದು ಸಾಧನಾ ಮಾರ್ಗವನ್ನು ಅನುಸರಿಸುವ ಬಯಕೆ ಉಂಟಾಯಿತು. ತಮ್ಮ ಭಕ್ತನಾದ ಶಂಭು ಮಲ್ಲಿಕನ ಮೂಲಕ ಏಸುಕ್ರಿಸ್ತನ ಪವಿತ್ರ ಜೀವನ ಮತ್ತು ಸಂದೇಶಗಳ ಸಂಬಂಧವಾಗಿ ಅವರು ಮಾಹಿತಿಯನ್ನು ಪಡೆದಿದ್ದರು. ದಕ್ಷಿಣೇಶ್ವರದ ಪಕ್ಕದಲ್ಲಿಯೇ ಶ್ರೀಮಂತ ಯದುನಾಥ ಮಲ್ಲಿಕನ ತೋಟದ ಮನೆ ಇತ್ತು. ಆ ಮನೆಯ ಬೈಠಕ್ ಖಾನೆಯಲ್ಲಿ ತಾಯಿಯ ಮಡಿಲಿನಲ್ಲಿ ಇರುವ ಬಾಲ ಏಸುವಿನ ಚಿತ್ರವಿತ್ತು. ಒಂದು ದಿನ ಶ್ರೀರಾಮಕೃಷ್ಣರು ಆ ಬಾಲ ಏಸುವಿನ ಚಿತ್ರವನ್ನು ತದೇಕಚಿತ್ತರಾಗಿ ನೋಡುತ್ತ, ಕ್ರಿಸ್ತನ ಅದ್ಭುತ ಜೀವನವನ್ನು ಸ್ಮರಿಸುತ್ತಿದ್ದರು. ನೋಡುತ್ತಿದ್ದಂತೆ ಆ ಚಿತ್ರವು ಜೀವಂತವಾಗಿ ಜ್ಯೋತಿರ್ಮಯವಾಗಿ ಕಾಣತೊಡಗಿತು. ಆ ದೇವಶಿಶುವಿನ ಅಂಗಗಳಿಂದ ಬೆಳಕಿನ ಕಿರಣಗಳು ಇವರ ಶರೀರವನ್ನು ಪ್ರವೇಶಿಸಿದವು. ಇದರಿಂದ ಶ್ರೀರಾಮಕೃಷ್ಣರು ಕ್ರೈಸ್ತಭಾವದಲ್ಲಿ ತಲ್ಲೀನರಾದರು. ಮೂರು ದಿನಗಳ ಕಾಲ ಅವರು ಈ ರೀತಿ ಕ್ರೈಸ್ತಭಾವದಲ್ಲಿ ತಲ್ಲೀನರಾದ ಮೇಲೆ ಪಂಚವಟಿಯಲ್ಲಿ ಓಡಾಡುತ್ತಿದ್ದಾಗ, ಒಂದು ಅದ್ಭುತ ದೃಶ್ಯವನ್ನು ಕಂಡರು. ಸುಂದರ ದಿವ್ಯಪುರುಷನೊಬ್ಬ ನೆಟ್ಟ ದೃಷ್ಟಿಯಿಂದ ಅವರನ್ನೇ ನೋಡುತ್ತ ಅವರೆಡೆಗೆ ಗಂಭೀರವಾಗಿ ನಡೆದು ಬಂದನು. ಅವನ ಮೈಬಣ್ಣವನ್ನು ನೋಡಿ ಅವರಿಗೆ ತಿಳಿಯಿತು, ಅವನು ವಿದೇಶೀಯನು ಎಂದು. ಅವನ ಅತ್ಯಂತ ಸೌಮ್ಯ ಮುಖಮಂಡಲವನ್ನು ನೋಡಿ ಶ್ರೀರಾಮಕೃಷ್ಣರು ಮುಗ್ಧರಾದರು. ಅವನು ಹತ್ತಿರ ಬರುತ್ತಿದ್ದಂತೆ ಶ್ರೀರಾಮಕೃಷ್ಣರು "ಇವನಾರು?" ಅಂದುಕೊಂಡರು. ಆಗ ಅವರ ಹೃದಯದಿಂದ ಧ್ವನಿ ಬಂತು, "ಇವನೇ ಯೇಸು ಕ್ರಿಸ್ತ" ಎಂದು. ಅನಂತರ ಕ್ರಿಸ್ತನು ಶ್ರೀರಾಮಕೃಷ್ಣರನ್ನು ಆಲಿಂಗಿಸಿಕೊಂಡು ಅವರಲ್ಲಿ ಲೀನವಾದನು. ಶ್ರೀರಾಮಕೃಷ್ಣರು ಭಾವ ಸಮಾಧಿಸ್ಥರಾದರು. ಹೀಗೆ ಕ್ರೈಸ್ತ ಧರ್ಮವನ್ನು ಕೂಡ ಅವರು ಅನುಸರಿಸಿ ಸಿದ್ಧಿಯನ್ನು ಪಡೆದರು.

**ಕ್ಷುದ್ರ ಮನಸ್ಸಿನವರು ಅನ್ಯಧರ್ಮಗಳನ್ನು ಹಳಿದು ತಮ್ಮ ಧರ್ಮವೇ ಅತ್ಯುತ್ತಮವೆಂದು ಸಾರಿ ಬೇರೆ ಬೇರೆ ಪಂಗಡಗಳನ್ನು ಮಾಡುವರು. ಯಾರ ಹೃದಯ ದೇವರಿಗಾಗಿ ಕಾತರಿಸುವುದೋ ಅವರು ಜಾತಿ ಮತಗಳ ವೈಷಮ್ಯದಿಂದ ದೂರ ಇರುವರು. – ಶ್ರೀರಾಮಕೃಷ್ಣ**

ಶ್ರೀರಾಮಕೃಷ್ಣರು ಭಗವಾನ್ ಬುದ್ಧನನ್ನು ಅವತಾರಪುರುಷನೆಂದು ನಂಬಿದ್ದರು. ಬುದ್ಧನು ತೋರಿದ ಮಾರ್ಗಕ್ಕೂ ಮತ್ತು ವೈದಿಕ ಜ್ಞಾನಮಾರ್ಗಕ್ಕೂ ಯಾವ ವ್ಯತ್ಯಾಸವೂ ಇಲ್ಲ ಎಂದು ಅವರು ಹೇಳುತ್ತಿದ್ದರು. ಜೈನ ಧರ್ಮದ ಪ್ರವರ್ತಕರಾದ ತೀರ್ಥಂಕರರ ಬಗ್ಗೆ ಶ್ರೀರಾಮಕೃಷ್ಣರು ಅವರ ಅನುಯಾಯಿಗಳಿಂದ ಕೇಳಿ ತಿಳಿದಿದ್ದರು. ಮಹಾವೀರ ತೀರ್ಥಂಕರನ ಬಗ್ಗೆ ಅವರಿಗೆ ಎಷ್ಟು ಶ್ರದ್ಧೆಯಿತ್ತೆಂದರೆ ಅವರ ಕೋಣೆಯಲ್ಲಿ ತೀರ್ಥಂಕರನ ಶಿಲಾಪ್ರತಿಮೆಯಿತ್ತು ಮತ್ತು ಅವರು ಅದಕ್ಕೆ ಪ್ರತಿನಿತ್ಯ ಧೂಪ ಹಾಕಿ ಪ್ರಣಾಮ ಸಲ್ಲಿಸುತ್ತಿದ್ದರು. ಸಿಕ್ಖರ ಹತ್ತು ಜನ ಗುರುಗಳ ಬಗ್ಗೆ ಅವರು ಹೇಳುತ್ತಿದ್ದರು, "ಅವರೆಲ್ಲರೂ ಜನಕ ಋಷಿಯ ಅವತಾರ. ಸಿಕ್ಖರು ನನಗೆ ಹೇಳಿರುವರು, ರಾಜರ್ಷಿ ಜನಕನಿಗೆ ಮುಕ್ತಿಯನ್ನು ಪಡೆಯುವುದಕ್ಕೆ ಮುಂಚೆ ಲೋಕಸಂಗ್ರಹವನ್ನು ಮಾಡಬೇಕೆಂಬ ಇಚ್ಛೆಯಾಯಿತು. ಆದ್ದರಿಂದ ನಾನಕನಿಂದ ಹಿಡಿದು ಗೋವಿಂದನವರೆಗೆ ಹತ್ತು ಬಾರಿ ಜನ್ಮವೆತ್ತಿ ಸಿಖ್ ಜನಾಂಗದಲ್ಲಿ ಧರ್ಮ ಸ್ಥಾಪನೆ ಮಾಡಿ ಪರಬ್ರಹ್ಮನಲ್ಲಿ ಐಕ್ಯವಾದನು ಎಂದು. ಸಿಕ್ಖರ ಈ ಮಾತನ್ನು ಸುಳ್ಳು ಎಂದು ಹೇಳಲಾಗದು."

ಎಲ್ಲ ಮತಗಳ ಸಾಧನೆಗಳಿಂದ ಸಿದ್ಧಿಯನ್ನು ಪಡೆದ ಮೇಲೆ ಅವರು "ಎಲ್ಲ ಮತಗಳೂ ಸತ್ಯ, ಎಷ್ಟು ಮತಗಳೋ ಅಷ್ಟು ಪಥಗಳು" ಎಂದು ಘೋಷಿಸಿದರು. ಇದನ್ನು ನಿರೂಪಿಸಲು ಅವರು ಒಂದು ಸುಂದರವಾದ ಉದಾಹರಣೆಯನ್ನು ಕೊಡುತ್ತಿದ್ದರು. "ಒಂದು ಊರಿನಲ್ಲಿ ಕುಡಿಯುವ ನೀರಿನ ಕೊಳವಿತ್ತು. ಊರಿನ ಜನರೆಲ್ಲರೂ ಅದರಿಂದ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು. ಕೆಲವರು ಅದನ್ನು 'ಅಕ್ವಾ' ಎಂದೂ, ಇನ್ನು ಕೆಲವರು ಅದನ್ನು 'ವಾಟರ್' ಎಂತಲೂ, ಇನ್ನು ಕೆಲವರು ಅದನ್ನು 'ಪಾನಿ' ಎಂತಲೂ, ಮತ್ತೆ ಕೆಲವರು ಅದನ್ನು 'ಜಲ' ಎಂತಲೂ ಕರೆಯುತ್ತಿದ್ದರು. ನೀರು ತೆಗೆದುಕೊಂಡು ಹೋಗುವ ಪಾತ್ರೆಗಳು ಬೇರೆ ಬೇರೆ ಇರಬಹುದು ಮತ್ತು ಕರೆಯುವ ಹೆಸರುಗಳು ಕೂಡ ಬೇರೆ ಬೇರೆ ಇರಬಹುದು. ಆದರೆ ನೀರು ಮಾತ್ರ ಅದೇ ತಾನೆ! ಅದರಂತೆಯೆ ದೇವರನ್ನು ಕೆಲವರು 'ಭಗವಂತ' ಎಂತಲೂ, ಇನ್ನು ಕೆಲವರು 'ಕಾಳಿ' ಎಂತಲೂ, ಇನ್ನು ಕೆಲವರು 'ಅಲ್ಲಾ' ಎಂತಲೂ, ಮತ್ತೆ ಕೆಲವರು 'ಗಾಡ್' ಎಂತಲೂ ಕರೆಯಬಹುದು. ಅವರೆಲ್ಲರೂ ಒಂದೇ ಸತ್ಯವನ್ನು ವಿವಿಧ ಹೆಸರಿನಿಂದ ಕರೆಯುತ್ತಿದ್ದಾರೆ, ಅಷ್ಟೇ."

ಎಲ್ಲ ಮತಗಳೂ ಭಗವಂತನೆಡೆಗೆ ಹೋಗುವ ಮಾರ್ಗಗಳಾದರೆ ಮತ್ತೇಕೆ ಈ ಜಗತ್ತಿನಲ್ಲಿ ಇಷ್ಟೊಂದು ಮತೀಯ ಕಲಹಗಳು ಆಗುತ್ತವೆ? ನಾವೇಕೆ ಜಗಳವಾಡುತ್ತಿದ್ದೇವೆ?– ಇದಕ್ಕೆ ಉತ್ತರವಾಗಿ ಶ್ರೀರಾಮಕೃಷ್ಣರು ಕತೆಯೊಂದನ್ನು ಹೇಳುತ್ತಿದ್ದರು: ನಾಲ್ವರು ಕುರುಡರು ಆನೆಯೊಂದನ್ನು ನೋಡಲು ಹೋದರು. ಕುರುಡರಿಗೆ ಆನೆಯನ್ನು ನೋಡಲು ಇರುವ ಏಕೈಕ ಮಾರ್ಗವೆಂದರೆ ಮುಟ್ಟಿ ನೋಡುವುದು. ಒಬ್ಬೊಬ್ಬರು ಆನೆಯ ಒಂದೊಂದು ಅಂಗವನ್ನು ಮುಟ್ಟಿ ನೋಡಿದರು. ಆನೆಯ ಕಾಲನ್ನು ಮುಟ್ಟಿದವನು ಆನೆ ಎಂದರೆ ಕಂಬದಂತೆ ಇದೆ ಅಂದುಕೊಂಡನು. ಆನೆಯ ಹೊಟ್ಟೆಯನ್ನು ಮುಟ್ಟಿದವನು ಆನೆ ಒಂದು ಗುಡಾಣದಂತೆ ಇದೆ ಅಂದುಕೊಂಡನು. ಆನೆಯ ಕಿವಿಯನ್ನು ಮುಟ್ಟಿದವನು ಆನೆ ಮೊರದಂತೆ ಇದೆ ಅಂದುಕೊಂಡನು. ಆನೆಯ ಸೊಂಡಿಲನ್ನು ಮುಟ್ಟಿದವನು ಆನೆಯೆಂದರೆ ಹಾವಿನಂತೆ ಇದೆ ಅಂದುಕೊಂಡನು. ತಿರುಗಿ ಹೋಗುವಾಗ ಅವರು ಆನೆಯನ್ನು ಕುರಿತು ತಮ್ಮಲ್ಲೇ ಚರ್ಚಿಸಲು ಪ್ರಾರಂಭಿಸಿದರು. ಮೊದಲನೆಯ ಕುರುಡನೆಂದ, "ಆನೆಯು ಕಂಬದಂತೆ ಇದೆ" ಎಂದು. ಅದಕ್ಕೆ ಎರಡನೆಯವನು "ಇಲ್ಲ, ಆನೆಯು ಗುಡಾಣದಂತೆ ಇದೆ" ಎಂದನು. ಮೂರನೆಯವನು "ಇಲ್ಲವೇ ಇಲ್ಲ! ಆನೆಯು ಮೊರದಂತೆ ಇದೆ" ಎಂದನು. ಅದಕ್ಕೆ ನಾಲ್ಕನೆಯವನು, "ನಿಮಗಾರಿಗೂ ಆನೆಯೆಂದರೆ ಏನೆಂದು ತಿಳಿದಿಲ್ಲ, ಏಕೆಂದರೆ ಆನೆಯು ಹೆಬ್ಬಾವಿನಂತೆ ಇದೆ" ಎಂದನು. ತಾನು ಹೇಳಿದ್ದೇ ಸರಿ ಎಂದು ನಾಲ್ವರೂ ಜಗಳವಾಡಲು ಪ್ರಾರಂಭಿಸಿದರು. ಕಣ್ಣು ಸರಿಯಾಗಿ ಕಾಣುತ್ತಿದ್ದ ದಾರಿಹೋಕನೊಬ್ಬ ಇವರ ಜಗಳಕ್ಕೆ ಕಾರಣ ಕೇಳಿದ. ನಾಲ್ವರೂ ಆನೆಯ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ತಾವು ಅಂದುಕೊಡಿದ್ದೇ ಸರಿ, ಇತರರು ಹೇಳುತ್ತಿರುವುದು ತಪ್ಪು ಎಂದು ಹೇಳಿದರು. ಅದಕ್ಕೆ ಆ ದಾರಿಹೋಕ, "ನೀವೆಲ್ಲರೂ ಹೇಳುತ್ತಿರುವುದು ಸರಿ. ಆನೆಯ ಕಾಲು ಕಂಬದಂತೆಯೂ, ಆನೆಯ ಹೊಟ್ಟೆ ಗುಡಾಣದಂತೆಯೂ, ಆನೆಯ ಕಿವಿ ಮೊರದಂತೆಯೂ, ಆನೆಯ ಸೊಂಡಿಲು ಹೆಬ್ಬಾವಿನಂತೆಯೂ ಇದೆ. ಆದರೆ ನೀವ್ಯಾರೂ ಆನೆಯನ್ನು ಪೂರ್ತಿಯಾಗಿ ನೋಡಿಲ್ಲ. ಏಕೆಂದರೆ ಆನೆಯು ಬಹು ದೊಡ್ಡ ಗಾತ್ರದ ಪ್ರಾಣಿ. ನೀವೆಲ್ಲ ಅದರ ಒಂದೊಂದು ಅಂಗವನ್ನು ಮಾತ್ರ ಮುಟ್ಟಿ ನೋಡಿದ್ದೀರಿ" ಎಂದು ಹೇಳಿದನು. ಈ ಕತೆಯನ್ನು ಹೇಳಿ, "ನಾವೆಲ್ಲರೂ ಆ ಕುರುಡರಂತೆ ಇದ್ದೇವೆ. ಭಗವಂತನನ್ನು ಕುರಿತು ನಮಗೆ ತಿಳಿದಿದ್ದೇ ಸಂಪೂರ್ಣ ಸತ್ಯ ಎಂದು ವಾದಿಸುತ್ತಿದ್ದೇವೆ. ನಮ್ಮೆಲ್ಲರ ಅನುಭವವೂ ಸತ್ಯ. ಭಗವಂತನು ಇವೆಲ್ಲವೂ ಆಗಿದ್ದಾನೆ ಮತ್ತು ಇವೆಲ್ಲವನ್ನೂ ಮೀರಿದವನು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

"ತಾಯಿ! ಎಲ್ಲರೂ ಅನ್ನುತ್ತಾರೆ ತಮ್ಮ ಗಡಿಯಾರವೇ ಸರಿ ಎಂದು. ಕ್ರೈಸ್ತರು, ಬ್ರಾಹ್ಮಸಮಾಜದವರು, ಹಿಂದೂಗಳು, ಮುಸ್ಲಿಮರು ಎಲ್ಲರೂ ಹೇಳುತ್ತಾರೆ, 'ನನ್ನ ಧರ್ಮವೊಂದೇ ಸತ್ಯ' ಎಂದು. ಆದರೆ ತಾಯಿ! ಸತ್ಯಸಂಗತಿ ಏನೆಂದರೆ ಯಾರ ಗಡಿಯಾರವೂ ಸರಿಯಾಗಿಲ್ಲ. ನಿನ್ನನ್ನು ಯಾರು ತಾನೇ ಅರಿಯಬಲ್ಲರು? ವ್ಯಾಕುಲ ಹೃದಯದಿಂದ ಪ್ರಾರ್ಥಿಸಿದರೆ, ನಿನ್ನ ಕೃಪೆಯಿಂದ ಯಾವ ಮಾರ್ಗದಿಂದಾದರೂ ನಿನ್ನನ್ನು ಸೇರಬಹುದು" ಎನ್ನುತ್ತಿದ್ದರು ಶ್ರೀರಾಮಕೃಷ್ಣರು.

ಚಕ್ರವರ್ತಿ ರಾಜಗೋಪಾಲಾಚಾರಿ ಅವರು ಶ್ರೀರಾಮಕೃಷ್ಣರ ಸಂದೇಶವನ್ನು ಕುರಿತು ಈ ರೀತಿ ಹೇಳುತ್ತಾರೆ: "ಮಿತ್ರರೇ, ಈ ದೇಶದ ರಾಜಕೀಯ ಮತ್ತು ಜನರ ಸಂಕಷ್ಟಗಳನ್ನು ನೋಡಿದ ಮೇಲೆ ಮತ್ತು ಪ್ರಸ್ತುತ ಪರಿಸ್ಥಿತಿಯನ್ನು ತಿಳಿದ ಮೇಲೆ, ನನ್ನ ದೃಢನಂಬಿಕೆಯೆಂದರೆ ಈ ದೇಶ ಉದ್ಧಾರವಾಗಬೇಕಾದರೆ ನಾವೆಲ್ಲ ಒಳ್ಳೆಯ ಹಿಂದುಗಳಾಗಬೇಕು. ಅಂದರೆ ಹಿಂದುಗಳು ಒಳ್ಳೆಯ ಹಿಂದುಗಳಾಗಬೇಕು, ಮುಸ್ಲಿಮರು ಒಳ್ಳೆಯ ಮುಸ್ಲಿಮರಾಗಬೇಕು, ಕ್ರಿಶ್ಚಿಯನ್ನರು ಒಳ್ಳೆಯ ಕ್ರಿಶ್ಚಿಯನ್ನರಾಗಬೇಕು. ಇಲ್ಲದಿದ್ದರೆ ಈ ದೇಶಕ್ಕೆ ಉಳಿಗಾಲವಿಲ್ಲ. ಒಳ್ಳೆಯ ಹಿಂದುವಾಗಲು, ಒಳ್ಳೆಯ ಕ್ರೈಸ್ತನಾಗಲು ಮತ್ತು ಒಳ್ಳೆಯ ಮುಸ್ಲಿಮನಾಗಲು ಶ್ರೀರಾಮಕೃಷ್ಣರ ಸಂದೇಶವನ್ನು ಅನುಸರಿಸುವುದನ್ನು ಬಿಟ್ಟು ಬೇರೆ ಮಾರ್ಗವಿಲ್ಲ."

ಪ್ರಸಿದ್ಧ ಇತಿಹಾಸಕಾರರಾದ ಆರ್ನಾಲ್ಡ್ ಟಾಯ್ನ್‌ಬಿ ಶ್ರೀರಾಮಕೃಷ್ಣರನ್ನು ಕುರಿತು ಈ ರೀತಿ ಹೇಳಿದ್ದಾರೆ: "ಭಾರತದಲ್ಲಿ ಹಿಂದುವಾಗಿ ಹುಟ್ಟಿದ್ದರಿಂದ ಅವರು ಮೊದಲು ಹಿಂದು ಮಾರ್ಗದ ಮೂಲಕ ಸತ್ಯದೆಡೆಗೆ ಸಾಗಿದರು. ನಂತರ ಅವರು ಮುಸ್ಲಿಂ ಮಾರ್ಗದ ಮೂಲಕ ಗುರಿಯನ್ನು ಸೇರಿದರು, ತದನಂತರ ಕ್ರೈಸ್ತ ಮಾರ್ಗದ ಮೂಲಕವೂ ಗಮ್ಯವನ್ನು ಸೇರಿದರು. ಈ ಎಲ್ಲ ಸಮಯದಲ್ಲೂ ಅವರು ಹಿಂದುವಾಗಿಯೇ ಇದ್ದರು."

ಸ್ವಾಮಿ ವಿವೇಕಾನಂದರು ತಮ್ಮ ಪ್ರಸಿದ್ಧ ಚಿಕಾಗೋ ಉಪನ್ಯಾಸದಲ್ಲಿ, "ಕ್ರೈಸ್ತ ಮತದವನೊಬ್ಬ ಹಿಂದುವೋ, ಬೌದ್ಧನೋ ಆಗುವುದು ಬೇಕಿಲ್ಲ, ಅದೇ ರೀತಿ ಹಿಂದುವೊಬ್ಬ ಬೌದ್ಧನೋ ಕ್ರೈಸ್ತನೋ ಆಗಬೇಕಿಲ್ಲ. ಆದರೆ ಪ್ರತಿಯೊಬ್ಬರೂ ಇತರರ ಭಾವವನ್ನು ಅರಗಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕು ಮತ್ತು ಬೆಳವಣಿಗೆಯ ನಿಯಮಕ್ಕೆ ಅನುಗುಣವಾಗಿ ಬೆಳೆಯಬೇಕು" ಎಂದು ಹೇಳಿದರು. ಅಂದರೆ ಯಾರೂ ಇತರರ ಧರ್ಮವನ್ನು ಅನುಸರಿಸುವುದು ಅಗತ್ಯವಿಲ್ಲ. ಶ್ರದ್ಧೆ ಮತ್ತು ವ್ಯಾಕುಲತೆಗಳಿಂದ ಕೂಡಿದ್ದರೆ, ಪ್ರತಿಯೊಂದು ಧರ್ಮದ ಮೂಲಕವೂ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಅದಕ್ಕಾಗಿ ತನ್ನ ಧರ್ಮದ ಸ್ವಂತಿಕೆಯನ್ನು ಉಳಿಸಿಕೊಂಡು, ಅದರೊಂದಿಗೆ ಇತರ ಧರ್ಮಗಳನ್ನೂ ಅರ್ಥಮಾಡಿಕೊಂಡು, ಅವುಗಳನ್ನು ಗೌರವಿಸುತ್ತ ಜೀವಿಸಬೇಕು. ಈ ಉದಾರ ಭಾವವನ್ನು ಶ್ರೀರಾಮಕೃಷ್ಣರು ತಮ್ಮ ಜೀವನ ಸಂದೇಶಗಳ ಮೂಲಕ ಜಗತ್ತಿಗೆ ಸಾರಿದರು.